# ಕ್ರೋಮ್‌ನಲ್ಲಿ ಟ್ರೆಂಡಿಂಗ್ ಸರ್ಚ್



■ **ಶಶಿಕುಮಾರ್ ಸಿ.**

ಹುಡುಕಾಟ ಹಾಗೂ ಡೌನ್‌ಲೋಡ್ ಆಯ್ಕೆಯಲ್ಲಿ ಹೊಸತನ ಕಲ್ಪಿಸಲು ಮೊಬೈಲ್ ಹಾಗೂ ಡೆಸ್ಕ್‌ಟಾಪ್ ಆವೃತ್ತಿಗಳೆರಡಕ್ಕೂ ಅನ್ವಯಿಸುವಂತೆ ಗೂಗಲ್, ಕ್ರೋಮ್ ಬ್ರೌಸರ್ ಅನ್ನು ಅಪ್‌ಡೇಟ್ ಮಾಡಿದೆ.

ಕ್ರೋಮ್‌ನ ಅಡ್ರೆಸ್ ಬಾರ್‌ನಲ್ಲಿ ಆ ಕ್ಷಣದ 'ಟ್ರೆಂಡಿಂಗ್ ಸರ್ಚ್ ಕಂಟೆಂಟ್' ಡಿಸ್‌ಪ್ಲೇ ಆಗುವಂತಹ ಅಪ್‌ಡೇಟ್ ಕಲ್ಪಿಸಿದ್ದು, ಇದರಿಂದ ಟ್ರೆಂಡಿಂಗ್ ಕಂಟೆಂಟ್ ಅನ್ನು ಸುಲಭವಾಗಿ ಪಡೆಯಬಹುದು. ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ (ಒಎಸ್) ಆಧರಿಸಿದ ಸ್ಮಾರ್ಟ್‌ಫೋನ್‌ಗಳಲ್ಲಿ ಮಾತ್ರ ಈ ಹೊಸ ಫೀಚರ್ ಲಭ್ಯವಿದ್ದು, 2024ರ ಆರಂಭದಲ್ಲಿ ಐಫೋನ್ ಕಾರ್ಯಾಚರಣೆ ವ್ಯವಸ್ಥೆಯಲ್ಲೂ (ಐಒಎಸ್) ಲಭ್ಯವಾಗಲಿದೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಗ್ಗೆ ಕ್ರೋಮ್‌ನಲ್ಲಿ ಹುಡುಕಾಟ ಆರಂಭಿಸಿದ್ದೀರಿ ಎಂದಿಟ್ಟುಕೊಳ್ಳೋಣ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಸಂಬಂಧಿಸಿದ ಹೊಸ ಬೆಳವಣಿಗೆಗಳ ಕುರಿತಾದ ಮಾಹಿತಿಯು ಲಿಂಕ್‌ಗಳು ಕ್ರೋಮ್‌ನ ಅಡ್ರೆಸ್ ಬಾರ್‌ನಲ್ಲಿ ಸಲಹೆ ರೂಪದಲ್ಲಿ ಗೋಚರವಾಗುತ್ತದೆ. ಸಲಹೆಗಳು 'ರಿಲೇಟೆಡ್ ಟು ದಿಸ್ ಪೇಜ್' ಅನ್ನುವ ಆಯ್ಕೆಯಡಿ ಕಾಣುತ್ತದೆ. ಇದನ್ನು ಬಳಸಿಕೊಂಡು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕುರಿತಾದ ಬೇರೆ ಮಾಹಿತಿಯ ಮೇಲೂ ಕಣ್ಣಾಯಿಸಬಹುದು.

ನೀವು ಜಪಾನ್ ಕುರಿತಾದ ಲೇಖನವೊಂದನ್ನು ಓದುತ್ತಿದ್ದೀರಿ ಅಥವಾ ಓದಲು ಅಡ್ರೆಸ್ ಬಾರ್‌ನಲ್ಲಿ ಹುಡುಕಾಟ ನಡೆಸಿದ್ದೀರಿ ಎಂದಿಟ್ಟುಕೊಳ್ಳಿ. ಅಡ್ರೆಸ್ ಬಾರ್‌ನಲ್ಲಿ ಈ ಬಗ್ಗೆ ಮಾಹಿತಿ ಟೈಪಿಸಿದೊಡನೆ ನೀವು ಹುಡುಕುತ್ತಿರುವ ವಿಷಯದ ಜೊತೆಗೆ 'ರಿಲೇಟೆಡ್ ಟು ದಿಸ್ ಪೇಜ್' ಅನ್ನುವ ಹೊಸ ಆಯ್ಕೆ ತೆರೆದುಕೊಳ್ಳುತ್ತದೆ. ಅದನ್ನು ಕ್ಲಿಕ್ಕಿಸಿ ಜಪಾನ್ ಕುರಿತಾದ ಇನ್ನಷ್ಟು ಮಾಹಿತಿಯನ್ನು ಪಡೆದುಕೊಳ್ಳಬಹುದು.

ಒತ್ತಿಹಿಡಿದ ನಂತರ ಆ್ಯಕ್ಟಿವೇಟ್ ಆಗುವ 'ಆ್ಯಂಡ್ರಾಯ್ಡ್ಸ್ ಟಚ್ ಟು ಸರ್ಚ್' ಎಂಬ ಆಯ್ಕೆ ಪರಿಚಯಿಸಿರುವ ಗೂಗಲ್, ಇದರ ಮೂಲಕವೂ ರಿಲೇಟೆಡ್ ಕಂಟೆಂಟ್‌ಗಳನ್ನು ಹುಡುಕಬಹುದು. ಲೇಖನವೊಂದನ್ನು ಓದುತ್ತಿರುವಾಗ ಮುಖ್ಯವಾದ ವಾಕ್ಯ ಅಥವಾ ಅಂಶವು ಕಂಡಾಗ ಅದನ್ನೊಮ್ಮೆ ಒತ್ತಿ ಹಿಡಿದರೆ ಅದಕ್ಕೆ ಸಂಬಂಧಿಸಿದ ಇನ್ನಿತರ ವಿಷಯಗಳು ತೆರೆದುಕೊಳ್ಳುತ್ತವೆ.

ಡೌನ್‌ಲೋಡ್ ವಿಚಾರಕ್ಕೆ ಬಂದರೆ, ಮ್ಯಾಕ್‌ಒಎಸ್, ವಿಂಡೋಸ್ ಮತ್ತು ಕ್ರೋಮ್ ಒಎಸ್‌ನಲ್ಲಿನ ಡೌನ್‌ಲೋಡ್ ಆಯ್ಕೆಗೆ ಹೊಸ ರೂಪ ನೀಡಲಾಗಿದೆ. ಇದು ರೀಡಿಸೈನ್ಡ್ ಡೌನ್‌ಲೋಡ್ಸ್ ಆಯ್ಕೆಯಾಗಿದ್ದು, ಡೌನ್‌ಲೋಡ್ ಆದ ಫೈಲ್‌ಗಳೊಂದಿಗೆ ಇನ್ನಷ್ಟು ಸುಲಭವಾಗಿ ವ್ಯವಹರಿಸಬಹುದು.

ಕ್ರೋಮ್‌ನ ಅಡ್ರೆಸ್ ಬಾರ್‌ನ ಬಲಭಾಗದ ಮೇಲ್ತುದಿಯಲ್ಲಿ ಹೊಸ ಡೌನ್‌ಲೋಡ್ ಟ್ರೇ ಕಾಣಿಸಿಕೊಳ್ಳಲಿದ್ದು, ಇದು ಅನಿಮೇಟೆಡ್ ರಿಂಗ್‌ನಂತೆ ಕಾಣುತ್ತದೆ. ಡೌನ್‌ಲೋಡ್ ಪ್ರೋಗ್ರೆಸ್ ಮತ್ತು ಡೌನ್‌ಲೋಡ್ ಆದ ಫೈಲ್‌ಗಳು ಬ್ರೀಫ್ ವ್ಯೂ ಕಾಣಬಹುದು. ■

## ಡಿಜಿಟಲ್ ಜಿಯೊಬುಕ್




ಡಿಜಿಟಲ್ ಕಲಿಕೆಯ ಬಗ್ಗೆ ಆಸಕ್ತಿಯುಳ್ಳ ಎಲ್ಲ ವಯೋಮಾನದವರ ಬಳಕೆಗೆ 'ರಿಲಯನ್ಸ್ ರೀಟೇಲ್' ಜಿಯೊಬುಕ್ ಪರಿಚಯಿಸಿದೆ. ಡಿಜಿಟಲ್ ಕಲಿಕಾಕ್ರಮವನ್ನು ಕೇಂದ್ರವಾಗಿಟ್ಟುಕೊಂಡು ರೂಪಿಸಿದ ಹಾಗೂ ವಿಶೇಷವಾಗಿ ಜಿಯೊಒಎಸ್ ಆಧರಿತವಾಗಿ ಕಾರ್ಯನಿರ್ವಹಿಸುವ ಉತ್ಪನ್ನವಾಗಿದೆ. ಜಿಯೊಬುಕ್ ಅನ್ನು ರಿಲಯನ್ಸ್ ರೀಟೇಲ್, ಭಾರತದ ಮೊದಲ ಕಲಿಕಾ ಪುಸ್ತಕ (India's First Learning Book) ಎಂದಿದೆ.

ಜಿಯೊಬುಕ್‌ನ ಒಳತಿರುಳುಗಳತ್ತ ಕಣ್ಣು ಹಾಯಿಸಿದರೆ ಅಲ್ಲಿ ಕೋಡಿಂಗ್ ಕಲಿಕೆ, ಯೋಗಸ್ಟುಡಿಯೊ ಆರಂಭಿಸುವಿಕೆ, ಡಿಜಿಟಲ್ ಬಿಸಿನೆಸ್ ಪ್ರಾರಂಭಿಸುವಿಕೆ ಹಾಗೂ ಆನ್‌ಲೈನ್ ತರಗತಿಗಳಿಗೆ ಹೆಚ್ಚು ಅನುಕೂಲವಾಗುವಂತಹ ಅಂಶಗಳು ಕಾಣುತ್ತವೆ. ಇದನ್ನು ಸಮರ್ಪಕವಾಗಿ ಬಳಕೆದಾರರು ಬಳಸಿಕೊಂಡಲ್ಲಿ ಡಿಜಿಟಲ್ ಕಲಿಕೆಯ ಪ್ರಮಾಣ ಇನ್ನಷ್ಟು ಹೆಚ್ಚಾಗುತ್ತದೆ ಎಂಬುದು ಕಂಪನಿಯ ಮಾತು. ಜಿಯೊಒಎಸ್ ಅನ್ನು ಭಾರತದ ಎಲ್ಲ ವಯೋಮಾನದವರಿಗೆ ಒಗ್ಗುವಂತೆ ಅಭಿವೃದ್ಧಿಪಡಿಸಲಾಗಿರುವುದು ವಿಶೇಷ.

ಜನಸಾಮಾನ್ಯರ ಕೈಗೆಟುಕುವ ದರದಲ್ಲಿರುವ ಈ ಜಿಯೊಬುಕ್‌ನಲ್ಲಿ ಬಳಕೆದಾರರ ಕಲ್ಪನೆಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಇಂಟರ್‌ಫೇಸ್, ಮಲ್ಟಿ ಟಾಸ್ಕಿಂಗ್ ಸ್ಕ್ರೀನ್‌ಗಳು, ಸದ್ಯ ಸುದ್ದಿಯಲ್ಲಿರುವ ಚಾಟ್‌ಜಿಪಿಟಿ ತಂತ್ರಜ್ಞಾನದ ಭಾಗವಾಗಿರುವ ಏಕೀಕೃತ ಚಾಟ್‌ಬಾಟ್ ವ್ಯವಸ್ಥೆ ಇದೆ. ಶೈಕ್ಷಣಿಕ ವಿಷಯಗಳ ಸಂಬಂಧಿತ ಚಾನಲ್‌ಗಳು ಜಿಯೊಟೀವಿಯಲ್ಲಿ ಲಭ್ಯವಾಗಲಿದ್ದು, ಕಲಿಕೆಗೆ ಇದು ಇಂಬು ನೀಡಲಿದೆ.

ನೋಟ್‌ಪ್ಯಾಡ್ ಮಾದರಿಯ ಈ ಉತ್ಪನ್ನವನ್ನು ದೇಶದಲ್ಲಿ ಡಿಜಿಟಲ್ ಕ್ಷೇತ್ರದತ್ತ ವಾಲುತ್ತಿರುವ ಕೋಟ್ಯಂತರ ಮಂದಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾರುಕಟ್ಟೆಗೆ ತರಲಾಗುತ್ತಿದೆ. ■